ಶ್ರೀ ಶಿವಾನಂದ ಹೆಚ್.ಕೌಜಲಗಿ : ಬೆಳಗಾಂನ ಡೆಪ್ಯೂಟಿ ಕಮಿಷನ್ರವರು ಮಾಡಿಲ್ಲ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾವು ಹೇಳಿದಾಗ ಕಲ್ಲಗುಂಡಿನಂತೆ ಕುಳಿತಿದ್ದರು. ನಾನು ಮಾಡುತ್ತೇನಪ್ಪ, ಏನೂ ಕಾಳಜಿ ಮಾಡಬೇಡಿ ಅಪ್ಪ ಎಂದು ಹೇಳಿದರು. ಅವರು ಹೆಳಿದ್ದನ್ನೆಲ್ಲಾ ಬಸವಣ್ಣನಂತೆ ಕೇಳಿಕೊಂಡು ಕುಳಿತೆವು.....

ಶ್ರೀ ಎಂ.ವೈ. ಘೋರ್ಪಡೆ : ನನ್ನ ವಾಕ್ಯವನ್ನು ಮುಗಿಸುವುದಕ್ಕಾದರೂ ಅವಕಾಶ ಕೊಡಿ. ನಾನು ಏನು ಹೇಳುತ್ತಿದ್ದೇನೆಂದರೆ, ಏನು ನಡೆದಿದೆ ಅದನ್ನು ಹೇಳುತ್ತಿದ್ದೇನೆ. ಎಲ್ಲೆಲ್ಲಿ ಸರ್ವಾನುಮತದಿಂದ ಮಾಡುವುದಕ್ಕೆ ಸಾಧ್ಯವಾಯಿತು ಅಲ್ಲಿ ಮಾಡಿದೆವು. ಎಲ್ಲಿ ಮಾಡಲಿಕ್ಕಾಗಲಿಲ್ಲ ಅದನ್ನು ಹೇಳುತ್ತಿದ್ದೇನೆ. ಸೆಂಡೂರಿನಲ್ಲಿ ಲಾಟರಿ ಮೂಲಕ ಎತ್ತಿದ್ದಾರೆ. ಏಕೆಂದರೆ, ಎಲ್ಲಿ ಎರಡು ಅಭಿಪ್ರಾಯ ಬಂತು ಅಲ್ಲಿ ತೀರ್ಮಾನ ಮಾಡುವುದಕ್ಕೆ ಲಾಟರಿ ಎತ್ತಿದ್ದಾರೆ. ಎಲ್ಲ ಕಡೆ ಲಾಟರಿ ಎತ್ತಿಲ್ಲ. ಎಲ್ಲಿ ಭಿನ್ನಾಭಿಪ್ರಾಯ ಬಂತು ಅಲ್ಲಿ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ಕಡೆ ಒಂದೊಂದು ನೀತಿ ಬೇಡ.

(ಗೊಂದಲ)

1.25 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಎಲ್ಲಿಯೂ ಲಾಟರಿ ಎತ್ತಿಲ್ಲ. ಇದಕ್ಕೆ ಸರ್ಕಾರದಿಂದ ಒಂದು ಹೊಸ ಸೂತ್ರವನ್ನು ಈ ಸದನದಿಂದ ಮಾಡೋಣ.

ಶ್ರೀ ಎಂ.ವೈ. ಘೋರ್ಪಡೆ : ನಾವು ಯಾವುದು ಮಾಡಿದರೂ ಕೂಡ ಅದಕ್ಕೆ ಒಂದು ತೊಂದರೆ ಉಂಟಾಗುತ್ತದೆ. ಆದಕಾರಣ ಲಾಟರಿ ಮಾಡಿದರೂ ಕೂಡ ಟೀಕೆ ಮಾಡಲಿಕ್ಕೆ ಆಸ್ಪದ ಇದೆ. ಆದಕಾರಣ ನಾವು ಯಾವುದಕ್ಕಾದರೂ ಒಂದಕ್ಕೆ ಒಪ್ಪಿಕೊಂಡು ಮುಂದಕ್ಕೆ ಹೋಗಬೇಕಾಗುತ್ತದೆ.

ಕೃಷಿ ಉತ್ಪಾದನೆಗಳ ರಫ್ತು

61-ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. *ರಾಜ್ಯದ ತೋಟಗಾರಿಕೆಯ ಉತ್ಪನ್ನಗಳನ್ನು ವಿದೇಶಕ್ಕೆ ರಫ್ತು ಮಾಡುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಆ. *ಹಾಗಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿರುವರು.*

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ. ಹೌದು.

ಆ. ರಾಜ್ಯದ ತೋಟಗಾರಿಕೆ ಉತ್ತನ್ನಗಳನ್ನು ವಿದೇಶಕ್ಕೆ ರಫ್ತು ಮಾಡಲು ಸರ್ಕಾರವು ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿರುತ್ತದೆ.

1. ಬೆಂಗಳೂರು ಮತ್ತು ಮೈಸೂರು ಸುತ್ತಮುತ್ತ ಹೂ ಉತ್ಪಾದನೆ ಮತ್ತು ರಫ್ತು ಸಾಮರ್ಥ್ಯ ಹಾಗೂ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಮಾವು ಉತ್ಪಾದನೆ ಮತ್ತು ರಫ್ತು ಸಾಮರ್ಥ್ಯ ತಿಳಿಯಲು ತಾಂತ್ರಿಕ ಆರ್ಥಿಕ ಸರ್ವೇಕ್ಷಣೆ ನಡೆಸಲು ಕ್ರಮ ತೆಗೆದುಕೊಳ್ಳಲಾಗಿದೆ.

2. ತೋಟಗಾರಿಕೆ ಉತ್ಪನ್ನಗಳ ರಫ್ತಿಗೆ ಅಗತ್ಯವಿರುವ ಮೂಲ ಸೌಕರ್ಯಗಳಾದ ಶೀಥಲ ಗೃಹಗಳನ್ನು ಸ್ಥಾಪಿಸಲು ಯೋಜಿಸಲಾಗಿದ್ದು ಈ ಬಗ್ಗೆ ಶ್ರೀ ದೇವಾರಿಯು ಪರಿಣಿತರಿಂದ ವರದಿಯನ್ನು ಸಿದ್ಧ ಪಡಿಸಲಾಗಿದೆ. ರಾಜ್ಯದಲ್ಲಿ ಒಟ್ಟು 10 ಸ್ಥಳಗಳಲ್ಲಿ ಶೀಥಲಗೃಹಗಳನ್ನು ನಿರ್ಮಿಸಲು ಯೋಜಿಸಲಾಗಿದೆ.
3. ರಾಜ್ಯದ ತೋಟಗಾರಿಕೆ ಉತ್ಪನ್ನಗಳನ್ನು ಸಹಕಾರ ವಲಯದ ಮೂಲಕ ರಫ್ತು ಮಾಡಲು ಕ್ರಮ ತೆಗೆದುಕೊಳ್ಳಲಾಗಿದ್ದು, ಈಗಾಗಲೇ ಹಾಪ್ಕಾಮ್ಸ್ ಸಂಸ್ಥೆಯು ಈ ದಿಸೆಯಲ್ಲಿ ಕಾರ್ಯೋನ್ಮುಖವಾಗಿದ್ದು ಹಣ್ಣು ಮತ್ತು ತರಕಾರಿಗಳ ರಫ್ತಿನಲ್ಲಿ ತೊಡಗಿರುತ್ತದೆ.
4. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆ ಬೇಡಿಕೆ, ದರಗಳ ಏರಿಳಿತ ಮತ್ತು ಸಂಬಂಧಿತ ಮಾರುಕಟ್ಟೆ ಮಾಹಿತಿಯನ್ನು ಸಂಗ್ರಹಿಸಿ, ವಿಮರ್ಶಿಸಿ ಉತ್ಪಾದಕರು ಮತ್ತು ರಫ್ತುದಾರರ ಅನುಕೂಲಕ್ಕಾಗಿ ಬಳಸುವ ಉದ್ದೇಶದಿಂದ 1994-95ನೇ ಸಾಲಿನಲ್ಲಿ 25 ಲಕ್ಷ ರೂಪಾಯಿಗಳ ವೆಚ್ಚದಲ್ಲಿ "ಮಾರಾಟ ಮಾಹಿತಿ ಕೇಂದ್ರವನ್ನು" ತೆರೆಯಲು ಉದ್ದೇಶಿಸಲಾಗಿದೆ.
5. ತೋಟಗಾರಿಕೆ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡಲು ಉತ್ತಮ ರೀತಿಯಲ್ಲಿ ಈ ಪದಾರ್ಥಗಳನ್ನು ಸಾಗಣೆ ಮಾಡುವ ದೃಷ್ಟಿಯಿಂದ 94-95ನೇ ಸಾಲಿನಲ್ಲಿ ಶೀಥಲ ಸಾರಿಗೆ ವಾಹನಗಳ ಬಳಕೆಯನ್ನು ಪ್ರೋತ್ಸಾಹಿಸಲು ಪ್ರತಿ ವಾಹನ ಖರೀದಿಗೆ 1ಲಕ್ಷ ರೂಪಾಯಿಗಳ ಸಹಾಯಧನವನ್ನು ರಾಷ್ಟ್ರೀಯ ತೋಟಗಾರಿಕಾ ಮಂಡಳಿಯಿಂದ ಪಡೆಯಲಾಗುತ್ತಿದೆ.
6. ಸಂಸ್ಕರಿಸಿದ ತೋಟಗಾರಿಕೆ ಉತ್ಪನ್ನಗಳ ಪದಾರ್ಥಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಿ ಉತ್ತಮ ಗುಣಮಟ್ಟ ಕಾಯ್ದು ಸಂಸ್ಕರಿಸಿ ರಫ್ತು ಮಾಡಲು ಇರುವ ಸಾಧಕ ಬಾಧಕಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಕರ್ನಾಟಕ ರಾಜ್ಯ ಕೃಷಿ ಕೈಗಾರಿಕೆ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ.
7. ತೋಟಗಾರಿಕೆ ಉತ್ಪಾದನೆ, ಗುಣಮಟ್ಟ ಮತ್ತು ಮಾರಾಟ ಚಟುವಟಿಕೆಯನ್ನು ವೃದ್ಧಿಗೊಳಿಸಲು ಮತ್ತು ರಫ್ತು ಉದ್ದೇಶಿತ ಮಾರಾಟ ಚಟುವಟಿಕೆಯ ತಂತ್ರಜ್ಞಾನವನ್ನು ರೈತರು, ಇಲಾಖಾಧಿಕಾರಿಗಳು ಆಸಕ್ತರು, ಉದ್ಯಮಿಗಳು, ರಫ್ತುದಾರರು ಇವರುಗಳಿಗೆ ನೀಡುವ ದೃಷ್ಟಿಯಿಂದ ರಾಜ್ಯ ಮಟ್ಟದ ತೋಟಗಾರಿಕೆ ತಂತ್ರಜ್ಞಾನ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.
8. ರಫ್ತು ಉದ್ದೇಶಿತ ಹೂ ಮತ್ತು ಅಲಂಕಾರಿಕ ಸಸ್ಯಗಳ ಉತ್ಪಾದನೆ ಪ್ರೋತ್ಸಾಹಿಸಲು ಅಗತ್ಯವಿರುವ ಮೂಲ ಭೂತ ಸೌಕರ್ಯಗಳಾದ ಗ್ರೀನ್ ಹೌಸ್ ಅಂಗಾಂಶ ಪ್ರಯೋಗಾಲಯ, ಹನಿ ನೀರಾವರಿಯಂತಹ ಆಧುನಿಕ ತಂತ್ರಗಳನ್ನು ಬಳಸಲು ಸಹಾಯಧನ ಒದಗಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ.ಟಿ. ರಾಮಸ್ವಾಮಿ : (ಶ್ರೀ ಎಂ.ಎಸ್. ಆತ್ಮಾನಂದರವರ ಪರವಾಗಿ) ಸ್ವಾಮಿ, ರಫ್ತು ಸಾಮರ್ಥ್ಯ ಹೆಚ್ಚು ಆಗುತ್ತಿರುವುದನ್ನು ತಿಳಿದುಕೊಳ್ಳುವುದಕ್ಕೆ ಸಮೀಕ್ಷೆ ಮಾಡುತ್ತೇವೆಂದು ಹೇಳುತ್ತೀರಿ, ಇದು ಯಾವಾಗ ಮುಗಿಯುತ್ತದೆ? ಇನ್ನೊಂದು ವಿಚಾರ ಅಂದರೆ ಹೆಚ್ಚು ರಫ್ತು ಮಾಡಲಿಕ್ಕೆ ಸರ್ಕಾರ ಉದ್ದೇಶಪಟ್ಟಿದೆಯೇ? ತೋಟಗಾರಿಕೆ ಉತ್ಪನ್ನಗಳನ್ನು ಸಹಕಾರಿ ವಲಯದ ಮೂಲಕ ರಫ್ತು ಮಾಡುತ್ತೇವೆಂದು ಹೇಳಿದ್ದೀರಿ. ರೈತರು ಸಹ ರಫ್ತು ಮಾಡಲಿಕ್ಕೆ ಅವಕಾಶ ಮಾಡಿ ಕೊಡುತ್ತೀರಾ?

ಶ್ರೀ ಎ. ಕೃಷ್ಣಪ್ಪ : ತೋಟಗಾರಿಕೆ ಇಲಾಖೆ ಮಿತಿಯಲ್ಲಿ ಹಾಪ್ಕಾಮ್ಸ ಸಂಸ್ಥೆ ಈಗಾಗಲೇ ಈ ದಿಕ್ಕಿನಲ್ಲಿ "ಅಪೆಡಾ" (APEDA) ದಿಂದ ನಾವು ಪರವಾನಿಗೆಯನ್ನು

ಪಡೆದುಕೊಂಡಿದ್ದೇವೆ. ಆರ್ಥಿಯಿಂದ ಪರವಾನಿಗೆಯನ್ನು ಪಡೆದುಕೊಂಡಿದ್ದೇವೆ. ಅನಂತರ ನಾವು ಈವರೆಗೂ ಕೆಲವು ದೇಶಗಳಿಗೆ ಈ ಒಂದು ತೋಟಗಾರಿಕೆ ಮಾಲುಗಳನ್ನು ಎಕ್ಸ್‌ಪೋರ್ಟ್ ಮಾಡಲಿಕ್ಕೆ ಕ್ರಮ ತೆಗೆದುಕೊಂಡು ಮಾಡಿದ್ದೇವೆ. ಈಗ ತಾವು ಖಾಸಗಿ ರೈತರಿಗೂ ಕೂಡ ಕೊಡುತ್ತೀರಾ ಎಂದು ಕೇಳಿದ್ದೀರಿ. ಅವರೂ ಸಹ ಅವರ ಇಚ್ಛಾನುಸಾರ ಮಾಡಬಹುದು. ಅವರು ನಮ್ಮ ಸರ್ಕಾರವನ್ನೇ ಕೇಳಿ ಮಾಡಬೇಕಾದಂಥ ಅವಶ್ಯಕತೆ ಏನೂ ಇಲ್ಲ. ಸರ್ಕಾರ ಮಾಡುತ್ತದೆಯೇ ಎಂದು ಕೇಳಿದ್ದೀರಿ, ಸರ್ಕಾರ ಮಾಡಲಿಕ್ಕೆ ನಾವು ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಮೂಲಭೂತವಾದ ಬೇಕಾದಂಥ ಸೌಕರ್ಯಗಳನ್ನು ಕೂಡ ಇವೊತ್ತು ಮಾಡುವ ದಿಕ್ಕಿನಲ್ಲಿ ಬಿಜಾಪುರ್, ಅಥಣಿ, ಬಾಗಲಕೋಟೆನಲ್ಲಿ ಫ್ರೀ ಕೂಲಿಂಗ್ ಮತ್ತು ಕೋಲ್ಡ್ ಸ್ಟೋರೇಜ್ ಪೆಸಿಲಿಟೀಸನ್ನು ಮಾಡಲಿಕ್ಕೆ 112 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಾಗಾಗಿ ಇದನ್ನು ಖಾಸಗಿಯವರು ಮಾಡುವುದಾದರೆ, ಅವರಿಗೆ ನಮ್ಮ ಕಡೆಯಿಂದ ಯಾವ ಅಡಚಣೆಗಳು ಇಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಈ ತೋಟಗಾರಿಕೆ ಉತ್ಪನ್ನಗಳನ್ನು ಎಷ್ಟು ಪ್ರಮಾಣದಲ್ಲಿ ರಫ್ತು ಮಾಡಲಿಕ್ಕೆ ನಮ್ಮ ರಾಜ್ಯದಲ್ಲಿ ಅವಕಾಶ ಇದೆ? ಇದರ ಜೊತೆಗೆ ತೋಟಗಾರಿಕೆ ಉತ್ಪನ್ನಗಳ ರಫ್ತಿಗೆ ಉತ್ತೇಜನ ಆಗಲಿ ಎಂದು ಶೀತಲ ಸಾರಿಗೆ ವಾಹನಗಳನ್ನು ತರಿಸಲಿಕ್ಕೆ ಕ್ರಮ ಕೈಗೊಂಡಿದ್ದೇವೆಂದು ತಿಳಿಸಿದ್ದೀರಿ. ಎಷ್ಟು ಶೀತಲ ಸಾರಿಗೆ ವಾಹನಗಳನ್ನು ಖರೀದಿಸಲಿಕ್ಕೆ 1993-94ನೇ ಸಾಲಿನಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೀರಿ?

ಶ್ರೀ ಎ. ಕೃಷ್ಣಪ್ಪ : ಒಂದು ನೂರು ಶೀತಲ ಗೃಹಗಳನ್ನು ಈಗಾಗಲೇ ಹಾಸನ ಜಿಲ್ಲೆಯನ್ನು ಸೇರಿ, ಮಾಡಬೇಕೆಂದು ಈ ವರ್ಷದಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಬಿಜಾಪುರ್, ಅಥಣಿ, ಬಾಗಲಕೋಟೆಯಲ್ಲಿ ಫ್ರೀ ಕೂಲಿಂಗ್ ಮತ್ತು ಕೋಲ್ಡ್ ಸ್ಟೋರೇಜ್ ಮಾಡಲಿಕ್ಕೆ ಅನುಮತಿಯನ್ನು ನಾವು ಈಗಾಗಲೇ ಕೊಟ್ಟಿದ್ದೇವೆ. ದುಡ್ಡು ಮಂಜೂರಾತಿ ಕೂಡ ಕೊಟ್ಟಿದ್ದೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಮಂತ್ರಿಗಳು ಶೀತಲ ಗೃಹಗಳ ಬಗ್ಗೆ ಹೇಳಿದರು. ಶೀತಲ ಸಾರಿಗೆ ವಾಹನ ಕೊಡುತ್ತೇವೆಂದು ಹೇಳಿದ್ದೀರಿ, ಎಷ್ಟು ಕೊಂಡು ಕೊಳ್ಳುತ್ತೀರಿ ಎಂದು ತಿಳಿಸಬೇಕು.

ಶ್ರೀ ಎ. ಕೃಷ್ಣಪ್ಪ : ಪ್ರಪೋಸಲ್ ಭಾರತ ಸರ್ಕಾರದ ಕಡೆ ಇದೆ, ಅವರು ಎಷ್ಟು ಮಂಜೂರಾತಿ ಕೊಡುತ್ತಾರೋ ಅಷ್ಟು ನಾವು ರಾಜ್ಯ ಸರ್ಕಾರದವರು ಜಾರಿ ಮಾಡುತ್ತೇವೆ.

1993-94ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಹಣ ವಿತರಣೆ.

11- ಶ್ರೀ ಗುರುಪಾದಪ್ಪ, ನಾಗಮಾರಪಲ್ಲಿ (ಔರದ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. 1993-94ನೇ ಸಾಲಿನಲ್ಲಿ (ಡಿಸೆಂಬರ್ 31ರವರೆಗೆ) ರಾಜ್ಯದ ವಿವಿಧ ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಲಾದ ಹಣದ ಪ್ರಮಾಣವೆಷ್ಟು? ಹಾಗೂ ಅದೇ ಸಾಲಿನಲ್ಲಿ ಮೀಸಲಾಗಿಟ್ಟಿದ್ದ ಹಣದ ಪ್ರಮಾಣವೆಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು).

ಆ. ಕಳೆದ ವರ್ಷ ಜನವರಿ 1993 ರಿಂದ ಡಿಸೆಂಬರ್ 31ರವರೆಗೆ ಬೀದರ್ ಜಿಲ್ಲಾ ಪರಿಷತ್ತಿನಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು? (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)